**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಎಂ.ವಿ.ಸಿ. 953/2022 ಮತ್ತು**

**ಎಂ.ವಿ.ಸಿ. 954/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಲತೇಶ್ವರ ಆರ್. | ಆರ್.ಡಬ್ಲ್ಯೂ.1 |
| ತಂದೆಯ/ಗಂಡನ ಹೆಸರು | : | ರುದ್ರಪ್ಪ ಆರ್. | |
| ವಯಸ್ಸು | : | 34 ವರ್ಷ | |
| ಕೆಲಸ | : | ಎಂ.ಡಿ.ವ್ಯಾಸಂಗ, ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ, ಚಿತ್ರದುರ್ಗ | ಸಾ ಪ್ರ ಬೋ |
| ವಾಸ | : | ಚಿತ್ರದುರ್ಗ | ದಿಃ22.01.2025 |

**ಮುಖ್ಯ ವಿಚಾರಣೆ 2 ನೇ ಎದುರುದಾರರ ಪರ : ಶ್ರೀ ಎಸ್.ವಿ. ವಕೀಲರಿಂದಃ**

1. ನಾನು ಡಿಸೆಂಬರ್ 2015 ರಿಂದ 09.03.2024 ರವರೆಗೆ ಸಮುದಾಯ ಆರೋಗ್ಯ ಕೇಂದ್ರ ಅಜ್ಜಂಪುರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಇಂದು ನ್ಯಾಯಾಲಯಕ್ಕೆ ನಮ್ಮ ಆಸ್ಪತ್ರೆಗೆ ಸಂಬಂಧಿಸಿದ ಎಂ.ಎಲ್.ಸಿ. ರಿಜಿಸ್ಟರ್‌ನ್ನು ತಂದಿದ್ದು, ದಿನಾಂಕ 15.02.2022 ರ ರಿಜಿಸ್ಟರ್‌ನ ದಾಖಲಾತಿಯ ದೃಡೀಕೃತ ಪ್ರತಿ ಕಡತದಲ್ಲಿ ಇದ್ದು ಮೂಲ ರಿಜಿಸ್ಟರ್‌ನ್ನು ಪರಿಶೀಲಿಸಿ ದೃಡೀಕೃತ ಪ್ರತಿಯನ್ನು ನಿ.ಆರ್.1 ಎಂದು ಗುರುತಿಸಲಾಯಿತು. ಸದರಿ ರಿಜಿಸ್ಟರಿನಲ್ಲಿ ಎಂ.ವಿ.ಸಿ. 953/2022 ಕ್ಕೆ ಸಂಬಂಧಿಸಿದ ಅರ್ಜಿದಾರರಾದ ಮಂಜುನಾಥ ಬಿನ್ ಶ್ರೀನಿವಾಸ ರವರಿಗೆ ಸಂಬಂಧಿಸಿದಂತೆ ದಿನಾಂಕ 15.02.2022 ರಂದು ರಾತ್ರಿ 7:45 ಕ್ಕೆ ಚಿಕಿತ್ಸೆ ನೀಡಿರುವ ಬಗ್ಗೆ ಉಲ್ಲೇಖ ಇದೆ. ಗಾಯಾಳು ನೀಡಿದಂತಹ ಹೇಳಿಕೆಯ ಆಧಾರದಲ್ಲಿ ಎಂ.ಎಲ್.ಸಿ. ರಿಜಿಸ್ಟರಿನಲ್ಲಿ ಉಲ್ಲೇಖ ಮಾಡುತ್ತೇನೆ ಎಂದರೆ ಸರಿ. ನಾನು ಹಾಜರುಪಡಿಸಿರುವಂತಹ ರಿಜಿಸ್ಟರಿನಂತೆ ಗಾಯಾಳುವಾದ ಮಂಜುನಾಥ ರವರು ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ರಿಜಿಸ್ಟರಿನಲ್ಲಿ ಅನ್‌ನೋನ್ ಬೈಕು ಮತ್ತು ಎತ್ತಿನ ಗಾಡಿಯ ನಡುವೆ ಅಪಘಾತ ಆಗಿದೆ ಎಂದು ಉಲ್ಲೇಖ ಮಾಡಿರುತ್ತೇನೆ ಎಂದರೆ ಸರಿ. ಒಮ್ಮೆ ರಿಜಿಸ್ಟರಿನಲ್ಲಿ ಉಲ್ಲೇಖ ಮಾಡಿದ ನಂತರ ಅದನ್ನು ತಿದ್ದುಪಡಿ ಮಾಡಿ ಬೇರೆ ಅಂಶವನ್ನು ಉಲ್ಲೇಖ ಮಾಡುವ ಕುರಿತು ಅನುಸರಿಸಬೇಕಾದ ಕಾನೂನಿನ ಪ್ರಕ್ರಿಯೆಯ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಬೇರೆ ಉಲ್ಲೇಖವನ್ನು ಮಾಡಬೇಕಾದಾಗ ಗಾಯಾಳುವಿನಿಂದ ಪ್ರಮಾಣ ಪತ್ರವನ್ನು

ಪಡೆದುಕೊಂಡು ಆ ನಂತರ ಉಲ್ಲೇಖ ಮಾಡಿ ತಿದ್ದುಪಡಿಯ ಬಗ್ಗೆ ಹಿಂಬರಹ ಸಹಿಯನ್ನು ಮಾಡಬೇಕಾಗುತ್ತದೆ ಎಂದರೆ ಸರಿ. ಆದರೆ ನಾನು ತಿದ್ದುಪಡಿ ಮಾಡಿರುವ ಕುರಿತು ಗಾಯಾಳು ಯಾವುದೇ ಪ್ರಮಾಣ ಪತ್ರವನ್ನು ನೀಡಿಲ್ಲ. ಗಾಯಾಳು ಪ್ರಮಾಣ ಪತ್ರ ನೀಡದ ಕಾರಣ ನಾನು ತಿದ್ದುಪಡಿ ಮಾಡಿ ಉಲ್ಲೇಖಿಸಿರುವ ಅಂಶ ಕಾನೂನು ಪ್ರಕ್ರಿಯೆಯ ಪ್ರಕಾರ ಇಲ್ಲ ಎಂದರೆ ಸರಿ.

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಪಿ.ಆರ್. ವಕೀಲರಿಂದಃ**

3. ಎಂ.ಎಲ್.ಸಿ. ರಿಜಸ್ಟರಿಗೆ ಮಂಜುನಾಥ ಬಿನ್ ಶ್ರೀನಿವಾಸ ರವರ ಗಾಯದ ಕುರಿತು ಸದರಿ ಗಾಯಾಳುವಿನ ಸಹಿಯನ್ನು ಪಡೆದಿಲ್ಲ ಎಂದರೆ ಸರಿ. ನಿ.ಆರ್.1 ರಲ್ಲಿ ಉಲ್ಲೇಖಿಸಿರುವಂತೆ ಗಾಯದ ಕಾರಣದ ಕುರಿತು ತುಂಬಾ ಜನ ಇದ್ದು, ಗಾಯಾಳು ಗಾಬರಿಯಲ್ಲಿ ಇದ್ದು ಮೊದಲು ಹೇಳಿಕೆಯನ್ನು ನೀಡಿದ್ದು, ನಂತರ ಗಾಯಾಳು ಸುಧಾರಿಸಿಕೊಂಡು ಹೇಳಿಕೆಯನ್ನು ನೀಡಿದ್ದು ಹಾಗಾಗಿ ಗಾಯಾಳುವಿನ ಹೇಳಿಕೆಯ ಆಧಾರದಲ್ಲಿ ತಿದ್ದುಪಡಿ ಮಾಡಿ ಹಿಂಬರಹ ಮಾಡಿರುತ್ತೇನೆ. ಗಾಯಾಳು ಮೊದಲು ಹೇಳಿಕೆಯನ್ನು ನೀಡಿದ ಸ್ವಲ್ಪ ಸಮಯದಲ್ಲಿಯೇ ಸುಧಾರಿಸಿಕೊಂಡು ಗಾಭರಿಯಿಂದ ಹೊರಬಂದು ಹೇಳಿಕೆಯನ್ನು ನೀಡಿರುತ್ತಾನೆ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ